

# ಶ್ರೀರಾಮಕೃಷ್ಣ ಸೇವಾಶ್ರಮ, ಕನಖಲ್ ಇದರ ಶತಮಾನದ ಹೆಜ್ಜೆಗುರುತು

ಡಾ. ಕಬ್ಬಿನಾಲೆ ವಸಂತ ಭರದ್ವಾಜ್

ಸ್ವಾಮಿ ವಿವೇಕಾನಂದರ ಕನಸನ್ನು ಅವರ ಒಬ್ಬರು ಶಿಷ್ಯರು ನನಸು ಮಾಡಿದ ಅಪೂರ್ವ ವೃತ್ತಾಂತ ಇಲ್ಲಿದೆ. ಶತಮಾನಕ್ಕೂ ಹೆಚ್ಚು ಕಾಲ ಜೀವನದಲ್ಲಿ ಶಿವನನ್ನು ಕಾಣುವ ಕೈಂಕರ್ಯ ಪುಣ್ಯನಗರಿಯಾದ ಹರಿದ್ವಾರದ ಕನ್‌ಖಲ್‌ನಲ್ಲಿ ನಡೆಯುತ್ತಲಿದೆ. ಇಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮದ ಪುಣ್ಯಕಥೆಯನ್ನು ಸ್ವಾರಸ್ಯವಾಗಿ ವಿವರಿಸಿರುವ ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿಗಳು. ಅಷ್ಟಾವಧಾನಿಗಳಾಗಿ ಪ್ರಸಿದ್ಧರಾಗಿರುವ ಇವರು ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ೫೦ಕ್ಕೂ ಹೆಚ್ಚು ಪುಸ್ತಕಗಳನ್ನು ತುಳು ಮತ್ತು ಕನ್ನಡದಲ್ಲಿ ಬರೆದಿದ್ದಾರೆ.

ಉತ್ತರ ಭಾರತದ ಹರಿದ್ವಾರದ ಕನಖಲ್‌ನಲ್ಲಿ ಕ್ರಿ.ಶ. ೧೯೦೧ ರಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮವು ಸ್ಥಾಪನೆಗೊಂಡಿತು. ಬಡಜನರ ಹಾಗೂ ಅನಾರೋಗ್ಯದಿಂದ ಬಳಲುವ ಸಾಧುಗಳ ಸೇವೆಗಾಗಿ ಈ ಸೇವಾಶ್ರಮವನ್ನು ಸ್ವಾಮಿ ವಿವೇಕಾನಂದರ ಶಿಷ್ಯರಾದ ಸ್ವಾಮಿ ಕಲ್ಯಾಣಾನಂದರು ಆರಂಭಿಸಿದರು. ಶ್ರೀರಾಮಕೃಷ್ಣ ಪರಮಹಂಸರು ಪರಂಧಾಮವನ್ನು ಸೇರಿದ ಬಳಿಕ ರಾಮಕೃಷ್ಣ ಮಹಾಸಂಘವು ಅವರ ಸಾಕ್ಷಾತ್ ಶಿಷ್ಯರಿಂದ ಆರಂಭವಾಯಿತು. ಕನಖಲ್‌ನಲ್ಲಿರುವ ಸೇವಾಶ್ರಮವು ಈ ಸಂಘದ ಅತ್ಯಂತ ಹಳೆಯ ಶಾಖೆಗಳಲ್ಲಿ ಒಂದು.

ಸ್ವಾಮಿ ಕಲ್ಯಾಣಾನಂದರು ತಮ್ಮ ಗುರುಗಳಾದ ಸ್ವಾಮಿ ವಿವೇಕಾನಂದರ ಸೂಚನೆಯ ಮೇರೆಗೆ, ೧೯೦೧ರ ಜೂನ್ ತಿಂಗಳಲ್ಲಿ, ಹರಿದ್ವಾರದ ಕನಖಲ್ ಎಂಬ ಪ್ರದೇಶದಲ್ಲಿ ಈ ಸೇವಾಯಜ್ಞಕ್ಕೆ ತೊಡಗಿದರು. ಮೂರು ರೂಪಾಯಿಗಳ ತಿಂಗಳ ಬಾಡಿಗೆಗೆ ಪಡೆದುಕೊಂಡ ಎರಡು ಕೊಠಡಿಗಳಲ್ಲಿ ಈ ಆಶ್ರಮ ಆರಂಭಗೊಂಡಿತು. ಆಗ ಕೇವಲ ಆರು ಮಂದಿ ಒಳರೋಗಿಗಳೂ, ೪೮ ಹೊರರೋಗಿಗಳೂ ಈ ಸೇವಾಶ್ರಮದ ಪ್ರಯೋಜನ ಪಡೆಯುತ್ತಿದ್ದರು. ೧೯೧೦ ರಲ್ಲಿ ಆಶ್ರಮದ ಹೆಸರನ್ನು 'ರಾಮಕೃಷ್ಣ ಮಿಷನ್ ಸೇವಾಶ್ರಮ' ಎಂದು ಬದಲಾಯಿಸಲಾಯಿತು. ಸ್ವಾಮಿ ವಿವೇಕಾನಂದರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ನಿಶ್ಚಯಾನಂದರು ೧೯೦೨ರಲ್ಲಿ ಸ್ವಾಮಿ ಕಲ್ಯಾಣಾನಂದರೊಂದಿಗೆ ಸೇರಿ ಸೇವಾಶ್ರಮವನ್ನು ಮುನ್ನಡೆಸಿದರು. ಬಾಡಿಗೆ ಕೊಠಡಿಗಳಲ್ಲಿದ್ದ ಸೇವಾಶ್ರಮಕ್ಕೆ ೧೯೦೩ರಲ್ಲಿ ೧೫ ಬಿಘಾ ಅಳತೆಯ ನಿವೇಶನ ದೊರೆಯಿತು. ೧೯೦೪ ರಲ್ಲಿ ಕಾರ್ಮಿಕರ ಮನೆ, ಶೌಚಾಲಯ, ಚಿಕಿತ್ಸಾಲಯಗಳೊಂದಿಗೆ ಸೇವಾಶ್ರಮದ ನಿರ್ಮಾಣಕಾರ್ಯ ಮುಗಿಯಿತು.

ಸೇವಾಶ್ರಮದಲ್ಲಿದ್ದ ಸ್ವಾಮಿ ನಿಶ್ಚಯಾನಂದರು ಪ್ರತಿದಿನ ಹದಿನೈದು ಮೈಲುಗಳ ಕಾಲುದಾರಿ ನಡೆದು ಋಷಿಕೇಶಕ್ಕೆ ಹೋಗಿ ಬರುತ್ತಿದ್ದರು. ಅಲ್ಲಿರುವ ರೋಗಿಗಳಿಗೆ ಔಷಧ ಮತ್ತು ಆಹಾರವನ್ನು ನೀಡುವುದೇ ಅವರ ಉದ್ದೇಶವಾಗಿತ್ತು. ಮಧ್ಯಾಹ್ನದ ಹೊತ್ತಿನಲ್ಲಿ ಋಷಿಕೇಶದಲ್ಲೇ 'ಮಧುಕರಿ ಭಿಕ್ಷೆ'ಯನ್ನು ಸ್ವೀಕರಿಸುತ್ತಿದ್ದರು. ಯಾವುದಾದರೂ ರೋಗಿಗೆ ಹೆಚ್ಚಿನ ಔಷಧೀಯ ಚಿಕಿತ್ಸೆ ಬೇಕಾದಲ್ಲಿ ಅವರನ್ನು ಕನಖಲ್‌ಗೆ ಕರೆದುಕೊಂಡು ಬಂದು ಉಪಚರಿಸುತ್ತಿದ್ದರು. ಈ ರೀತಿಯ ನಿಸ್ವಾರ್ಥ ಸೇವೆಗಾಗಿ ಭಾರತ ಸರ್ಕಾರವು ೧೯೧೧ರಲ್ಲಿ ಸ್ವಾಮಿ ಕಲ್ಯಾಣಾನಂದರಿಗೆ 'ದರಬಾರ್ ಪದಕ' ವನ್ನು ನೀಡಿ ಗೌರವಿಸಿತು.

೧೧೨ ವರ್ಷಗಳಿಗೂ ಹಿಂದೆ ಕನಖಲ್‌ನಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮವು ಮಾಡಿದ ವೈದ್ಯಕೀಯ ಸೇವೆ 'ಮಾನವೀಯ ಮುಖದ ಭಗವದಾರಾಧನೆ' ಎಂದರೆ ಅತಿಶಯೋಕ್ತಿಯಾಗದು. ಆಧುನಿಕ ಔಷಧ ಮತ್ತು ಚಿಕಿತ್ಸಾಕ್ರಮಗಳು ಇರದ ಆ ಕಾಲದಲ್ಲಿ ರೋಗಿಗಳನ್ನು ಸಂತೈಸಿದ ಈ ಕಾರ್ಯವು ಸ್ವಾಮಿ ವಿವೇಕಾನಂದರು ಶಿಷ್ಯರಿಗೆ ಉಪದೇಶಿಸಿದ ಸೇವಾಧರ್ಮದೀಕ್ಷೆಯ ಫಲವೇ ಸರಿ. ಸ್ವಾಮಿ ನಿಶ್ಚಯಾನಂದರಿಗೆ ಸ್ವಾಮಿ ವಿವೇಕಾನಂದರು ಒಮ್ಮೆ ಹೇಳಿದ್ದರಂತೆ: "ಮಹತ್ತಾದುದನ್ನು ಮಾಡಲು ಸಾಧ್ಯವಾಗದೇ ಇದ್ದರೂ ಪರವಾಗಿಲ್ಲ; ಒಂದು ಪೈಸೆಯಿಂದ ಮಣ್ಣಿನ ಮಡಕೆಯೊಂದನ್ನು ಕೊಂಡುಕೊಂಡು ಅದರಲ್ಲಿ ನೀರು ತುಂಬಿಸಿ ದಾರಿಹೋಕರ ತೃಷೆಯನ್ನು ನಿವಾರಿಸು" ಎಂದು ! ಆ ಮಾತಿನಿಂದ ಸ್ಫೂರ್ತಿ ಪಡೆದ ಸ್ವಾಮಿ ನಿಶ್ಚಯಾನಂದರು ಕನಖಲ್‌ನಲ್ಲಿ ಅದ್ಭುತವನ್ನೇ ಸಾಧಿಸಿಬಿಟ್ಟರು!

ಸೇವಾಶ್ರಮದ ಒಟ್ಟು ಭೂಮಿ ಮತ್ತು ಕಟ್ಟಡಗಳ ಮೌಲ್ಯವು ೧೯೩೮ರಲ್ಲಿ ರೂ. ೮೭,೧೮೦ಗಳಷ್ಟಾಗಿತ್ತು. ೧೯೫೭ರಲ್ಲಿ ಒಟ್ಟು ೧೦.೫೫ ಎಕರೆಗಳಷ್ಟು ಭೂಮಿಯನ್ನು ಅದು ಹೊಂದಿತ್ತು. ಸಾಧುಗಳಿಗೆ ಕುಟೀರ, ಸಿಬ್ಬಂದಿಗಳಿಗೆ ಮನೆ, ಹಾಲಿನ ಸರಬರಾಜಿಗೆ ಗೋಶಾಲೆ ಮತ್ತು ಕೃಷಿ ಚಟುವಟಿಕೆಗಳು,



ಒಳರೋಗಿಗಳಿಗಾಗಿ ೫೦ ಹಾಸಿಗೆಗಳ ಆಸ್ಪತ್ರೆ – ಹೀಗೆ ಒಂದೊಂದೇ ಸೌಲಭ್ಯಗಳು ಸೇರ್ಪಡೆಗೊಳ್ಳುತ್ತಾ ಬಂದವು. ೧೯೬೮ರಲ್ಲಿ 'ಸ್ವಾಮಿ ವಿವೇಕಾನಂದ ಶತಮಾನೋತ್ಸವ ಆಸ್ಪತ್ರೆ' ಸುಸಜ್ಜಿತ ಮೂರು ಮಹಡಿಗಳ ಕಟ್ಟಡದಲ್ಲಿ ನೆಲೆ ನಿಂತಿತು. ಇದರ ಉದ್ಘಾಟನೆಯನ್ನು ಆಗಿನ ಉತ್ತರಪ್ರದೇಶದ ಘನತೆವೆತ್ತ ರಾಜ್ಯಪಾಲರಾದ ಡಾ. ಬಿ. ಗೋಪಾಲರೆಡ್ಡಿ ಅವರು ನೆರವೇರಿಸಿದರು. ಅನಂತರದ ವರ್ಷಗಳಲ್ಲಿ ಸೇವಾಶ್ರಮದ ಅಭಿವೃದ್ಧಿ ಇನ್ನಷ್ಟು ಹೆಚ್ಚಿತು. ಸ್ವಾಮಿ ಪ್ರಜ್ಞಾನಂದ ಮೊದಲಾದ ದಕ್ಷ ಕಾರ್ಯದರ್ಶಿಗಳ ದೂರದೃಷ್ಟಿಯಿಂದ ಒಂದೊಂದೇ ಪ್ರಗತಿಕಾರ್ಯಗಳು ಸಾಕಾರಗೊಂಡವು.

ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆ, ಎಕ್ಸ್‌ರೇ ಮತ್ತು ಶಸ್ತ್ರಚಿಕಿತ್ಸಾ ಕೇಂದ್ರ ಮುಂತಾದ ಸೌಲಭ್ಯಗಳು ಕಾಲಕ್ರಮೇಣ ಏರ್ಪಟ್ಟವು. ಈ ಮಹದುದ್ದೇಶಕ್ಕೆ ಭಾರತ ಸರಕಾರವೂ ತನ್ನ ಸಹಾಯ ಹಸ್ತವನ್ನು ಚಾಚಿತು.

ಹರಿದ್ವಾರದ ಸುತ್ತಮುತ್ತಲಿನ ಗುಡ್ಡಗಾಡಿನ ಹಳ್ಳಿಯ ಜನರಿಗೆ ವೈದ್ಯಕೀಯ ಸೌಲಭ್ಯ ನೀಡಲು ಸೇವಾಶ್ರಮ ಬಿಟ್ಟರೆ ಬೇರೆ ವ್ಯವಸ್ಥೆಯೇ ಆ ಕಾಲದಲ್ಲಿ ಇರಲಿಲ್ಲ. ರೋಗಿಗಳ ಶುಶ್ರೂಷೆಯ ಎಲ್ಲ ಹೊಣೆಯನ್ನೂ ಸಾಧುಸಂನ್ಯಾಸಿಗಳೇ ನಿಭಾಯಿಸುತ್ತಿದ್ದರು.

ಆದರೆ ರೋಗಿಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಇದು ಪ್ರಯಾಸಕರವಾಯಿತು. ಈ ಕಾರಣದಿಂದ 'ಸಂಚಾರಿ ಚಿಕಿತ್ಸಾಲಯ'ವೊಂದನ್ನು ಆರಂಭಿಸುವ ಯೋಚನೆ ಹುಟ್ಟಿತು. ಹಾಂಗ್‌ಕಾಂಗ್‌ನ ಶ್ರೀ ಮೋಹನ್ ಬಿ. ಮುರ್ಜಾನಿ ಎಂಬ ದಾನಿಗಳು ನೀಡಿದ ರೂ. ೧೪,೦೦,೦೦೦/- ಉದಾರ ದೇಣಿಗೆಯಿಂದ ೧೯೭೨ – ೭೩ರಲ್ಲಿ ಸಂಚಾರಿ ಚಿಕಿತ್ಸಾಲಯವು ಆರಂಭವಾಯಿತು. ಭಾರತ ಸರ್ಕಾರವೂ ಈ ಮಹತ್ ಕಾರ್ಯದಲ್ಲಿ ಭಾಗಿಯಾಯಿತು. ೧೯೭೮ರಲ್ಲಿ ಎರಡನೇ ಸಂಚಾರಿ ಘಟಕವೂ ಉತ್ತರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮ್ ನರೇಶ್ ಯಾದವ್ ಅವರಿಂದ ಉದ್ಘಾಟನೆಗೊಂಡಿತು. ಮುಂದಿನ ವರ್ಷಗಳಲ್ಲಿ ಆಧುನಿಕ ವೈದ್ಯಕೀಯ ಸೌಲಭ್ಯಗಳು ಒಂದೊಂದೇ ಸೇರ್ಪಡೆಗೊಂಡವು. ಆಂತರಿಕ ದೂರವಾಣಿ ವ್ಯವಸ್ಥೆ, ಜನರೇಟರ್ ಸೌಲಭ್ಯ, ನೀರಿನ ಟ್ಯಾಂಕ್ ನಿರ್ಮಾಣ ಇತ್ಯಾದಿಗಳಿಂದ ಸೇವಾಶ್ರಮದ ಆಸ್ಪತ್ರೆ ಸುಸಜ್ಜಿತವಾಯಿತು.

| ಸೇವಾಸೌಲಭ್ಯ ಪಡೆದವರು (ಅಂಕಿ ಅಂಶ) | | | | |
|---|---|---|---|---|
| ಅವಧಿ | ಒಳರೋಗಿಗಳು | ಹೊರರೋಗಿಗಳು | ಸಂಚಾರಿ ಚಿಕಿತ್ಸಾಲಯ | ಒಟ್ಟು |
| ೧೯೦೧-೧೯೬೬-೬೭ | ೫,೫೬೨೮ | ೩೦,೩೬೪೭೫ | – | ೩೦, ೯೨೧೦೩ |
| ೧೯೬೭-೬೮-೮೪-೮೫ | ೩,೧೦೮೮ | ೨೦,೫೫೦೭೪ | ೭, ೨೮೪೯೬ | ೨೮, ೧೪೬೫೮ |
| ೧೯೮೫-೮೬-೨೦೦೦-೦೧ | ೫,೪೭೧೮ | ೨೭,೭೫೪೩೨ | ೪, ೮೩೮೬೬ | ೩೩, ೧೪೦೧೬ |
| | ೧, ೪೧,೪೩೪ | ೭,೮೬,೬೯೮೧ | ೧೨, ೧೨೩೬೨ | ೯೨,೨೦, ೭೭೭ |



ಕನಖಲ್ ಸೇವಾಶ್ರಮದ ಇತಿಹಾಸವೆಂದರೆ ಮಾನವೀಯ ಸೇವೆಯ ಇತಿಹಾಸ. ಹರಿದ್ವಾರದ ಹಿಮಾಲಯ ಪರ್ವತ ಪ್ರದೇಶಗಳಲ್ಲಿ ನೊಂದ ಜನರ ಸೇವೆಯಲ್ಲಿ ಅದು ಸಾರ್ಥಕತೆಯನ್ನು ಮೆರೆದಿದೆ. ಈ ಆಶ್ರಮದ ಸೇವಾಕಾರ್ಯಕ್ಕೆ ಭಾರತ ಸರಕಾರವು ನೀಡುವ ಒಂದು ಕೋಟಿ ರೂಪಾಯಿಗಳ 'ಗಾಂಧಿ ಶಾಂತಿ ಪ್ರಶಸ್ತಿ' ೧೯೯೮ರಲ್ಲಿ ಲಭಿಸಿದೆ. ದೇಶದ ಮಹಾನ್ ನಾಯಕರಾದ ಸರ್ವಶ್ರೀ ಲಾಲಾ ಲಜಪತ್ ರಾಯ್ (೧೯೦೭), ಸಹೋದರಿ ನಿವೇದಿತಾ, ಸರ್ ಜಗದೀಶಚಂದ್ರಬೋಸ್ (೧೯೧೦), ಮಹಾತ್ಮ ಗಾಂಧಿ (೧೯೧೫), ಡಾ. ಎಸ್. ರಾಧಾಕೃಷ್ಣನ್ (೧೯೪೨), ವಿಜಯಲಕ್ಷ್ಮಿ ಪಂಡಿತ್ (೧೯೪೭), ಲಾಲ್‌ಬಹದ್ದೂರ್ ಶಾಸ್ತ್ರೀ (೧೯೫೩) ಮುಂತಾದವರು ಇಲ್ಲಿಗೆ ಭೇಟಿ ನೀಡಿ ಆಶ್ರಮದ ಸೇವಾಕಾರ್ಯಕ್ಕೆ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಸೇವಾಶ್ರಮದ ಸಂಸ್ಥಾಪಕರಾದ ಸ್ವಾಮಿ ಕಲ್ಯಾಣಾನಂದರು ೧೯೩೭ ರಲ್ಲಿ ಮಸ್ಸೂರಿಯಲ್ಲಿ ಪರಂಧಾಮವನ್ನೈದಿದರು. ಸ್ವಾಮಿ ನಿಶ್ಚಯಾನಂದರು ಮೂರು ದಶಕಗಳ ಸೇವಾವಧಿಯ ಕೊನೆಗೆ ೧೯೩೪ರಲ್ಲಿ ಇಹಲೋಕದ ಯಾತ್ರೆ ಮುಗಿಸಿದರು. ಅವರ ಉತ್ತರಾಧಿಕಾರಿಗಳು ಆ ಸೇವಾಯಜ್ಞವನ್ನು ಮುಂದುವರಿಸಿದರು.

## ಇತರ ಚಟುವಟಿಕೆಗಳು

**ರಾತ್ರಿಶಾಲೆ :** ೧೯೧೩, ನವೆಂಬರ್ ತಿಂಗಳಲ್ಲಿ ಪರಿಶಿಷ್ಟ ಮತ್ತು ಅವಕಾಶವಂಚಿತ ವಿದ್ಯಾರ್ಥಿಗಳಿಗೆ ರಾತ್ರಿಶಾಲೆಯನ್ನು ಆರಂಭಿಸಲಾಯಿತು.

**ಗ್ರಂಥಾಲಯ :** ೧೯೦೫ ರಿಂದ ಆರಂಭಗೊಂಡ ಈ ಗ್ರಂಥಾಲಯಕ್ಕೆ ಉತ್ತರಪ್ರದೇಶದ ರಾಯ್‌ಬಹಾದುರ್ ಲಾಲಾ ಬಾಜಿನಾಥ ಎಂಬ ಉದಾರದಾನಿಗಳು ೧೫೨ ಪುಸ್ತಕಗಳನ್ನು ದಾನ ನೀಡಿದರು. ಇತ್ತೀಚಿಗೆ ಗ್ರಂಥಾಲಯದ ಕಟ್ಟಡ ನವೀಕರಣಗೊಂಡಿದೆ.

**ದೇಗುಲಗಳು :** ೧೯೩೦ರಲ್ಲಿ ದೇಗುಲವೊಂದನ್ನು ನಿರ್ಮಿಸಲಾಗಿದ್ದು, ಅಮೃತಶಿಲೆಯನ್ನು ನೆಲಕ್ಕೆ ಹಾಸಲಾಯಿತು. ೧೯೭೩ ರಲ್ಲಿ ಹೊಸದಾದ ಮತ್ತೊಂದು ದೇಗುಲವನ್ನು ನಿರ್ಮಿಸಿ, ೧೯೮೧ರಲ್ಲಿ ಅಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಅಮೃತಶಿಲಾ ವಿಗ್ರಹವನ್ನು ಸ್ಥಾಪಿಸಲಾಯಿತು. ೧೯೫೨ರಲ್ಲಿ ಆಶ್ರಮದ ಹಿಂಭಾಗದ ಗಂಗಾನದಿಯ ತಟದಲ್ಲಿ ಸ್ನಾನಘಟ್ಟವನ್ನು ನಿರ್ಮಿಸಲಾಯಿತು.

**ಉತ್ಸವಗಳು :** ೧೯೦೩ರಿಂದಲೂ ಕನಖಲ್ ಆಶ್ರಮವು ಹರಿದ್ವಾರದ ಕುಂಭಮೇಳದಲ್ಲಿ ಭಾಗವಹಿಸುತ್ತಾ ಬಂದಿದೆ. ಶ್ರೀರಾಮಕೃಷ್ಣ ಪರಮಹಂಸರು (೧೯೩೬), ಶ್ರೀಶಾರದಾದೇವಿ (೧೯೫೩), ಸ್ವಾಮಿ ವಿವೇಕಾನಂದರು (೧೯೬೩) – ಇವರುಗಳ ಜನ್ಮಶತಮಾನೋತ್ಸವಗಳನ್ನು ಸಂಭ್ರಮದಿಂದ ಆಚರಿಸುವುದರೊಂದಿಗೆ ಪೂರ್ಣಕುಂಭಮೇಳ (೧೯೯೮), ಸೇವಾಶ್ರಮದ ಶತಮಾನೋತ್ಸವ (೨೦೦೧) ಇತ್ಯಾದಿಗಳನ್ನು ಸಡಗರದಿಂದ ಆಚರಿಸಿದೆ.

| ಆಶ್ರಮ ಕೈಗೊಂಡ ಪರಿಹಾರ ಮತ್ತು ಪುನರುಜ್ಜೀವನ ಕಾರ್ಯ | |
|---|---|
| ತೆಹ್ರಿಯಲ್ಲಿ ಕಾಲರಾ ಪರಿಹಾರ ಕಾರ್ಯ | ೧೯೧೩ |
| ಸೇವಾಶ್ರಮದ ಸಮೀಪ ಉಂಟಾದ ಅಗ್ನಿ ಆಕಸ್ಮಿಕದ ಪರಿಹಾರ ಕಾರ್ಯ | ೧೯೧೪ |
| ಗಂಗಾನದಿ ಪ್ರವಾಹ ಪರಿಹಾರ ಕಾರ್ಯ | ೧೯೨೪ |
| ಪಶ್ಚಿಮ ಪಾಕಿಸ್ತಾನ ನಿರಾಶ್ರಿತ ಪರಿಹಾರ ಮತ್ತು ಪುನರುಜ್ಜೀವನ ಕಾರ್ಯ | ೧೯೪೭ |
| ಕುಮ್ಹಾರ್ ಬಸ್ತಿ ಅಗ್ನಿ ಆಕಸ್ಮಿಕದ ಪರಿಹಾರ ಕಾರ್ಯ | ೧೯೪೯ |
| ಉತ್ತರಕಾಶಿ ಭೂಕಂಪ ಪರಿಹಾರ ಕಾರ್ಯ | ೧೯೯೧-೯೨ |

೧೯೭೯ರಲ್ಲಿ ಸೇವಾಶ್ರಮವು ಮಠ ಮತ್ತು ಮಿಷನ್ ಎಂದು ವಿಂಗಡಿಸಲ್ಪಟ್ಟಿತು. ಸ್ಥಾಪನೆಗೊಂಡ ಕಾಲದಿಂದ ಇದುವರೆಗೂ ಕನಖಲ್ ಆಶ್ರಮವು ಕ್ರಿಯಾಶೀಲವಾಗಿದ್ದು, ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಸೇವಾಕಾರ್ಯಗಳಲ್ಲಿ ತೊಡಗಿಕೊಂಡು ಶತಮಾನದ ದೀರ್ಘಪಥದಾಚೆಗೂ ಹೆಜ್ಜೆಗುರುತುಗಳನ್ನು ದಾಖಲಿಸಿರುವುದು ಗಮನಾರ್ಹ.